# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103**

ಸಂಖ್ಯೆ:ತುವಿ:ಶೈವಿ:ಪಿ.ಜಿ:2026-27/1110 ದಿನಾಂಕ:24.06.2026

**ಸುತ್ತೋಲೆ**

ವಿಷಯ:ಬೇಡಿಕೆಯಿರುವ ಸ್ನಾತಕೋತ್ತರ ವಿಭಾಗ/ಕೋರ್ಸ್‌ಗಳ ಪ್ರವೇಶಾತಿಗೆ ಮತ್ತು ಪ್ರಸ್ತುತವಿರುವ ಸ್ನಾತಕೋತ್ತರ ವಿಭಾಗಗಳ ಪ್ರವೇಶ ಮಿತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವ ಕುರಿತು

ಉಲ್ಲೇಖ:1. ಸಿಂಡಿಕೇಟ್ ಸಭಾ ನಿರ್ಣಯ ದಿನಾಂಕ:24.01.2026

2. ಮಾನ್ಯಕುಲಪತಿಯವರ ಅನುಮೋದನೆ ದಿನಾಂಕ:23.06.2026 (ಕಂಡಿಕೆ-22)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(01)ರ ಸಿಂಡಿಕೇಟ್ ಸಭಾ ನಿರ್ಣಯದಂತೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸುವ ಸಂಬಂಧ ಬೇಡಿಕೆಯಿರುವಂತಹ ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸುವ ಹಾಗೂ ಪ್ರಸ್ತುತ ಲಭ್ಯವಿರುವ ಸ್ನಾತಕೋತ್ತರ ವಿಭಾಗ/ಕೋರ್ಸ್‌ಗಳ ಪ್ರವೇಶಮಿತಿಯನ್ನು ಹೆಚ್ಚಿಸಿ ಅದರಿಂದ ಬರುವಂತಹ ಶುಲ್ಕದಿಂದ ಆಂತರಿಕ ಸಂಪನ್ಮೂಲಗಳ ಬೆಳವಣಿಗೆಯಾಗುವ ಸಂಬಂಧ ಪ್ರಸ್ತುತ ಲಭ್ಯವಿರುವ ಮೂಲಭೂತ ಸೌಲಭ್ಯಗಳಡಿಯಲ್ಲಿಯೇ ಬೇಡಿಕೆಯಿರುವಂತಹ ಸ್ನಾತಕೋತ್ತರ ವಿಭಾಗ/ಕೋರ್ಸ್‌ಗಳನ್ನು ಪ್ರಾರಂಭಿಸುವ ಸಂಬಂಧ ಪ್ರಸ್ಥಾವನೆಯನ್ನು ಮತ್ತು ಪ್ರಸ್ತುತವಿರುವ ವಿಭಾಗ/ಕೋರ್ಸ್‌ಗಳ ಹಿಂದಿನ ಮೂರು ವರ್ಷಗಳ ಪ್ರವೇಶ ಮಿತಿ, ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಮಾಹಿತಿ ಮತ್ತು ನಿಗದಿಪಡಿಸಿರುವ ಪ್ರವೇಶ ಶುಲ್ಕದ ಮಾಹಿತಿ, ಈ ಹಿಂದಿನ ಶೈಕ್ಷಣಿಕ ಸಾಲುಗಳಲ್ಲಿ 10 ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ವಿಭಾಗ/ಕೋರ್ಸ್‌ಗಳನ್ನು ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಮುಂದುವರೆಸಬೇಕಾ ಅಥವಾ ಬೇಡವಾ, ಪ್ರತಿವರ್ಷವೂ ಅಧಿಸೂಚನೆಯನ್ನು ಹೊರಡಿಸುತ್ತಿರುವ ಕೆಲವು ವಿಭಾಗ/ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆಯುತ್ತಿಲ್ಲ ಅಂತಹ ಕೋರ್ಸ್‌ಗಳನ್ನು ಪ್ರಸ್ತುತ ಸಾಲಿನ ಅಧಿಸೂಚನೆಯಲ್ಲಿ ಸೇರಿಸದಿರುವ ಕುರಿತು ಈ ಎಲ್ಲಾ ಮಾಹಿತಿಯನ್ನು ವಿಭಾಗೀಯ ಪರಿಷತ್‌ನಲ್ಲಿ ಚರ್ಚಿಸಿ ದಿನಾಂಕ:30.06.2026 ರ ಒಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

ಆದೇಶದ ಮೇರೆಗೆ

ಉಪಕುಲಸಚಿವರು

ಸಹಾಯಕ ಕುಲಸಚಿವರು

ಶೈಕ್ಷಣಿಕ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ

ಗೆ,

ಅಧ್ಯಕ್ಷರು / ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಕಚೇರಿ ಪ್ರತಿ.